


**ಬ್ಯೂಟಿ ಬೆಳ್ಳಕ್ಕಿ**
ಲೇ: ಲಲಿತಾ ಕೆ. ಹೊಸಪ್ಯಾಟಿ
ಬೆ: ರೂ. 190; ಪ್ರ: ಅವ್ಯಕ್ತ ಪ್ರಕಾಶನ, ಬೆಂಗಳೂರು.
ಮೊ: 8792693438.

ಅಜ್ಜಿಯೇ ಹೇಳುವುದು ವಿಶೇಷ. ಆಕೆ ಹಾಗೆ ಕಥಾ ನಿರೂಪಣೆ ಮಾಡುತ್ತಾ ಮಕ್ಕಳಲ್ಲಿ ಆದರ್ಶಗಳನ್ನು ತುಂಬುತ್ತಾಳೆ. ಮೌಲ್ಯಗಳನ್ನು ಮನದಟ್ಟು ಮಾಡಿಸುತ್ತಾಳೆ. ಕರುಣೆ, ಪರೋಪಕಾರಗಳನ್ನು ಸಾರುವ, ನಿಸ್ವಾರ್ಥತೆಯನ್ನು ಬೀರುವ, ಆರ್ತರನ್ನು ಕಾಪಾಡುವ ಹಳ್ಳಿಯ ಜನರ ಕಥೆಗಳು ಇಲ್ಲಿದ್ದು ಸುಗಮವಾಗಿ ಓದಿಸಿಕೊಳ್ಳುತ್ತವೆ. ಮಕ್ಕಳ ಮನೋವಿಕಾಸದ ದೃಷ್ಟಿಯಿಂದ ಈ ಕೃತಿ ಗಮನಾರ್ಹ. ಸರಳ ನಿರೂಪಣೆ, ಸಹಜ ಭಾಷಾ ಶೈಲಿ. ಸುಂದರ ಉತ್ಪಾದನೆ.

**ಬ್ಯೂಟಿ ಬೆಳ್ಳಕ್ಕಿ**
ಮಕ್ಕಳ ಒಡನಾಟದಲ್ಲಿ ನಿಡುಗಾಲ ಕಳೆದಿರುವ ಲಲಿತಾ ಕೆ. ಹೊಸಪ್ಯಾಟಿ ಅವರ ಆಕರ್ಷಕ ಕಥನ ಕ್ರಮದ ಕೃತಿ 'ಬ್ಯೂಟಿ ಬೆಳ್ಳಕ್ಕಿ' ಹತ್ತು ಕಥೆಗಳ ಗುಚ್ಛ. ಆರಿಸಿಕೊಂಡ ವಸ್ತುವಿನಲ್ಲಿ ಹೊಸತನವಿದೆ. ಮನಸೆಳೆಯುತ್ತಲೇ ಬೋಧಿಸಬಲ್ಲ ಗುಣ ಅಂತರ್ಗತವಾಗಿದೆ.

ಗಾತ್ರ ಸಣ್ಣದಾದರೂ ಪುಟ್ಟ ಇರುವೆ ದೊಡ್ಡ ಮರದ ಸೊಕ್ಕು ಮುರಿಯುವ ಕಥೆ 'ಮರ ಅಲುಗಾಡಿಸಿದ ಇರುವೆ'. 'ಗಾಳಿ ಬೀಸಿದ ದೇವರು' ಕಥೆಯಲ್ಲಿ ಮಗುವಿನ ಮುಗ್ಧತೆಯನ್ನು ಮನಗಾಣಿಸಿದ್ದಾರೆ. ಒಂದು ರೆಕ್ಕೆಯೇ ಇಲ್ಲದ 'ಬೆಳ್ಳಿ' ಎನ್ನುವ ಬೆಳ್ಳಕ್ಕಿ ಬೆಡಗು ಬಿನ್ನಾಣಗಳಿಗಿಂತ ಗುಣವೇ ನಿಜವಾದ ಸೌಂದರ್ಯ ಎನ್ನುವುದನ್ನು ಸಮರ್ಥಿಸುತ್ತದೆ. ಪುಟ್ಟ ಕಥೆಗಳು ಮಿಂಚುಹುಳುವಿನಂತೆ ಸಂಸ್ಕಾರ ಸದ್ಗುಣಗಳನ್ನು ಹೊಳೆಯಿಸುತ್ತವೆ. ಬಣ್ಣಗಳಲ್ಲಿ ಮಿದ್ದಿರುವ ಚಿತ್ರಗಳು, ಬಳಸಿದ ಕಾಗದ, ಉತ್ಪಾದನೆಯ ಗುಣಮಟ್ಟ ವಿದೇಶಿ ಪ್ರಕಟಣೆಗಳನ್ನು ಸರಿಗಟ್ಟುತ್ತದೆ. ●

## ನನ್ನ ಓದು



ರಾಧೇಶ ತೋಳ್ಪಾಡಿ

# ಮಹತ್ವದ ಪುಸ್ತಕ ಮಾಲೆ

ವಸಂತ ಪ್ರಕಾಶನ ಸಂಸ್ಥೆಯು 'ವಸಂತ ಬಾಲ ಸಾಹಿತ್ಯ ಮಾಲೆ'ಯಡಿಯಲ್ಲಿ ಅತ್ಯಪೂರ್ವ 12 ಮಕ್ಕಳ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದೆ. ಅಭಿನವ ಪ್ರಕಾಶನ ಸಂಸ್ಥೆಯು ಹಿರಿಯ ಕವಿ ಕೆ.ವಿ. ತಿರುಮಲೇಶ್ ಅವರ 'ಆದಿ ಕಾವ್ಯ ಮಾಲೆ'ಯ 10 ಮಕ್ಕಳ ಕವಿತೆಗಳ ಸಂಕಲನವನ್ನು ಮತ್ತು ಆನಂದ ಪಾಟೀಲ ಅವರು ಕನ್ನಡಕ್ಕೆ ಅನುವಾದಿಸಿದ ಎ.ಎ. ಮಿಲ್ನೆ ಅವರ 'ವಿನ್ನೀ ಪೂಹಾ' ಮಕ್ಕಳ ಕಾದಂಬರಿಯನ್ನು ಹೊರತಂದಿದೆ. ಕನ್ನಡದಲ್ಲಿ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇವೆಲ್ಲ ಚರಿತ್ರಾರ್ಹ ಸಂಗತಿಗಳು.

ಎಚ್.ಎಸ್. ವೆಂಕಟೇಶ ಮೂರ್ತಿಯವರ ಸಂಪಾದಕತ್ವದಲ್ಲಿ ಹೊರಬಂದ ವಸಂತ ಬಾಲ ಸಾಹಿತ್ಯ ಮಾಲೆಯ ಪ್ರತಿ ಕೃತಿಯೂ ಕನ್ನಡ ಮಕ್ಕಳ ಕೈಗೆ ಸಿಗಬೇಕಾದವು. ಚಿಂತಾಮಣಿ ಕೊಡ್ಲೆಕೆರೆ ಅವರ 'ಓಕೆ ಮೇಕೆ' ತನ್ನ ಭಾಷಾ ವಿಲಾಸ, ಭಾವ ಸಮೃದ್ಧಿಯಿಂದ ತಟಕ್ಕನೆ ಓದುಗನನ್ನು ಆಕರ್ಷಿಸುವ ಗುಣವನ್ನು ಹೊಂದಿದೆ.